ಸುಧಾ 60 ವಜ್ರ ಮಹೋತ್ಸವ

## 'ಸುಧಾ' ಜೊತೆಗಿನ ಓದುಗರ ಒಡನಾಟ

### ಕಾಯುವ ಸರದಿ ಮಗನದ್ದು...

'ಸುಧಾ' ನಮ್ಮ ಮನೆಯ ವಾರದ ಅತಿಥಿ. ಅಜ್ಜಿಯ ಮಧ್ಯಾಹ್ನದ ಗೆಳತಿ. 'ಸುಧಾ'ದಲ್ಲಿ ನನ್ನ ಅಮ್ಮನ ಸಣ್ಣಕಥೆಗಳು ಪ್ರಕಟವಾದಾಗ ಮನೆಯಲ್ಲಿ ಎರಡು ಪ್ರತಿಗಳು. ಅಜ್ಜನ ಜೊತೆ ಕೈ ಹಿಡಿದು ಅವರ ಸ್ನೇಹಿತರಿಗೆ ಓದಲು ಕೊಟ್ಟು, ಮರುದಿನ ಅವರ ಅನಿಸಿಕೆ ಕೇಳಿ ಹಿಂಪಡೆಯುತ್ತಿದ್ದದ್ದು ಒಂದು ಸುಂದರ ನೆನಪು.

ನನಗೆ ಓದಲು ವೈಯಕ್ತಿಕ ಆಸಕ್ತಿ ಮೂಡಿಸಿದ್ದು ಪ್ರಥಮ ವರ್ಷದ ಪಿಯುಸಿ ಓದುವಾಗ ಹದಿಹರೆಯದ ಮನಗಳಿಗೆ ಮುದ ನೀಡಿದ 'ಯುವ ವೇದಿಕೆ' ಅಂಕಣ. ನನ್ನ ಪ್ರಯತ್ನಕ್ಕೆ ಪ್ರೋತ್ಸಾಹ ದೊರಕಿ ಕೆಲವು ಬರಹಗಳು, ಅದೂ ಫೋಟೊ ಸಮೇತ ಪ್ರಕಟವಾದಾಗ ಗೆಳತಿಯರ ಗುಂಪಿನಲ್ಲಿ ವಿಶೇಷ ಸ್ಥಾನ ಗಳಿಸಿದ್ದೆ.

ಈಗ, ಗುರುವಾರದ ಬೆಳಿಗ್ಗೆ 'ಸುಧಾ'ಗಾಗಿ ಕುತೂಹಲದಿಂದ ಕಾಯುವ ಸರದಿ ನನ್ನ ಮಗನದ್ದು. ಎಳೆಯರ ಅಂಗಳ, ಕುಂಚ ಪ್ರಪಂಚ ತಿರುವು ಹಾಕಿದ ನಂತರ ಶಾಲೆಗೆ ಹೊರಡುವುದು ಅವನ ಅಭ್ಯಾಸ.

ಬದಲಾಗುತ್ತಿರುವ ಕಾಲಮಾನಕ್ಕೆ ತಕ್ಕಂತೆ ಸಮಕಾಲೀನ ವಿಷಯಗಳು, ವಿಶೇಷ ಲೇಖನಗಳು, ಕಥೆಗಳು, ಸಿನಿಮಾ ಸುದ್ದಿಗಳು, ಅಡುಗೆ ವೈವಿಧ್ಯಗಳಿಂದ 'ಸುಧಾ' ವಾರಪತ್ರಿಕೆ ನಮ್ಮ ಮನೆ ಮಂದಿಯವರನ್ನು ಕೈ ಹಿಡಿದು ಮುಂದುವರೆಸುತ್ತಿದೆ. ಹೀಗೆಯೇ ನಮ್ಮ ಹಾಗೂ 'ಸುಧಾ' ನಡುವಿನ ಬಾಂಧವ್ಯ ಸಾಗಲಿ...

—ಕಾವ್ಯ ಭಾರದ್ವಾಜ್, ಬೆಂಗಳೂರು

### ಹಚ್ಚಹಸುರು ನೆನಪುಗಳು

ಗುಂಡ್ಲುಪೇಟೆಯಿಂದ ಆರಂಭವಾದ ನನ್ನ, 'ಸುಧಾ'ಳ ಒಡನಾಟ, ಬೆಂಗಳೂರಿನಲ್ಲೂ ನಿರಂತರವಾಗಿ ಸಾಗಿದೆ. ಆಗ 'ಕಾಮಧೇನು' ವಿಭಾಗದಲ್ಲಿ ಪ್ರಕಟವಾಗುತ್ತಿದ್ದ ಕಿವಿಮಾತು, ರಾಜರತ್ನಂ ಅವರ ಬರಹ, ಜಿ.ಕೆ. ಸತ್ಯ, ಹುಬ್ಳೀಕರ್ ಅವರ ಆಕರ್ಷಕ ಚಿತ್ರಗಳು, ದಿನಕರ ದೇಸಾಯಿ ಅವರ ಚುಟುಕು, ಹಾಸ್ಯಬ್ರಹ್ಮ ಬೀಚಿ ಅವರ ನಗೆಲೇಪಿತ ಉತ್ತರಗಳು, ನಾಡಿಗ್, ಕೆ.ಆರ್.ಸ್ವಾಮಿ ಅವರ ವ್ಯಂಗ್ಯಚಿತ್ರಗಳು... ಇವೆಲ್ಲ ಮನದಾಳದಲ್ಲಿ ಹಚ್ಚಹಸುರಾಗಿವೆ.

ಎಡಕಲ್ಲು ಗುಡ್ಡದ ಮೇಲೆ, ಸ್ನೇಹಪಲ್ಲವಿ, ಅಂತ, ಅಬ್ರಾಹ್ಮಣ, ಶಬ್ದಗಳು, ಹೊಂಬಿಸಿಲು, ವಿಮುಕ್ತಿ, ವಾರದಿಂದ ವಾರಕ್ಕೆ ಕುತೂಹಲ ಮೂಡಿಸುತ್ತಿದ್ದ ಈ ಧಾರಾವಾಹಿಗಳನ್ನು ಓದುತ್ತಿದ್ದುದೇ ರೋಚಕ ಅನುಭವ. ಬಾಲ್ಯ, ಯೌವನ, ಮುಪ್ಪು ಎಲ್ಲಾ ಕಾಲದಲ್ಲೂ 'ಸುಧಾ' ನೆಚ್ಚಿನ ಸಂಗಾತಿ. 'ಸುಧಾ' ಓದುಗರನ್ನು ತಣಿಸುತ್ತಾ, ಆಕರ್ಷಿಸುತ್ತಾ ಸತತವಾಗಿ ಮುಂದುವರೆಯುತ್ತಿರಲೆಂದು ತುಂಬು ಹೃದಯದಿಂದ ಹಾರೈಸುತ್ತೇನೆ.

—ರತ್ನಾಮೂರ್ತಿ, ಬೆಂಗಳೂರು

### ಮನೋವಿಕಾಸದ ತಂತು

ಸುಮಾರು 55 ವರ್ಷಗಳ ಅನುಬಂಧ 'ಸುಧಾ' ಪತ್ರಿಕೆ ಜೊತೆಗೆ. ನಮ್ಮ ಹಳ್ಳಿಯಲ್ಲಿ 'ಸುಧಾ' ತರಿಸುತ್ತಿದ್ದ ಕೆಲವೇ ಮನೆಗಳಲ್ಲಿ ನಮ್ಮದೂ ಒಂದು. ಶುಕ್ರವಾರ ಮುಂಜಾನೆಯಿಂದಲೇ ಮನೆಮಂದಿಯೆಲ್ಲ ಪತ್ರಿಕೆಗೆ ಕಾಯುತ್ತಾ, ಬಂದೊಡನೆ ಕೈಗೆ ದಕ್ಕಿದವರಿಗೆ ಸ್ವರ್ಗ ಸಿಕ್ಕಷ್ಟೇ ತೃಪ್ತಿ! ಪ್ರತಿ ವಾರವೂ ಪೈಪೋಟಿ.

ನನಗೆ ಮಕ್ಕಳ ಪುಟದ ಕಾಮಿಕ್ಸ್ ಫ್ಯಾಂಟಮ್, ಮಾಂಡ್ರೇಕ್, ಜಿ.ಪಿ. ರಾಜರತ್ನಂ ಅವರ ಜಾತಕ ಕಥೆಗಳು. ದೊಡ್ಡವರಿಗೆ ಧಾರಾವಾಹಿ ಓದುವ ಹಂಬಲ. ವಿಡಂಬನೆ, ಕತೆಗಳು, ನೀವು ಕೇಳಿದಿರಿ... ಹಿರಿಯ ರಂಗಕಲಾವಿದರ 'ಬಣ್ಣದ ಬದುಕು' ಅಂಕಣ... ಮುಂತಾದ ವೈವಿಧ್ಯಮಯ ಲೇಖನಗಳ ಮೂಲಕ ಮನರಂಜನೆ ಜೊತೆಗೆ ಮನೋವಿಕಾಸಕ್ಕೆ 'ಸುಧಾ' ವಿಶಿಷ್ಟ ಕೊಡುಗೆ ನೀಡಿದೆ.

ಹಲವು ಗಣ್ಯರ ಕಾದಂಬರಿಗಳು ನನ್ನಲ್ಲಿ ಓದಿನ ಗೀಳು ಹೆಚ್ಚಿಸಿದ್ದವು. ಆಧುನಿಕ ಬೇತಾಳ ಕತೆಗಳು ಸರಣಿ, ಬಿಟಿಎಸ್ ಬಸ್ಸಲ್ಲಿ ಏರೋಬಿಕ್ಸ್, ಪ್ರಯೋಗಶೀಲತೆಗೆ ತೆರೆದುಕೊಂಡ ಫೋಟೊ ಕಾಮಿಕ್ಸ್... ನೆನಪುಗಳ ಸರಮಾಲೆ ಬೆಳೆಯುತ್ತದೆ. ಕಾಲಕಾಲಕ್ಕೆ ತನ್ನ ರೂಪ, ವೈವಿಧ್ಯದಿಂದ ಸಮಕಾಲೀನತೆಗೆ ಸ್ಪಂದಿಸುವ ಈ ಪತ್ರಿಕೆ ನೂರ್ಕಾಲ ರಂಜಿಸಲಿ.

—ಶಶಿಧರ ಭಾರಿಘಾಟ್, ಕೆ.ಆರ್. ಪೇಟೆ

### ಓದುವ ಸಂಭ್ರಮಕ್ಕೆ 'ಸುಧಾ'

'ಸುಧಾ' ಬಗ್ಗೆ ಅಭಿಮಾನ ಮತ್ತು ಭಾವನಾತ್ಮಕ ಸಂಬಂಧ ಹೊಂದಿರುವ ಸಹಸ್ರಾರು ಓದುಗರಲ್ಲಿ ನಾನೂ ಒಬ್ಬ. 'ಸುಧಾ'ಳ ಕೆಲವು ವರ್ಷಗಳ ಓದಿನ ಬಳಿಕ ಅವುಗಳಲ್ಲಿ ಪ್ರಕಟವಾದ, ನನಗಿಷ್ಟ ಎನ್ನಿಸಿದ ಬರಹಗಳಿಗೆ ಪ್ರತಿಕ್ರಿಯೆ, ಅಭಿಪ್ರಾಯ ಬರೆಯಲು ಆರಂಭಿಸಿ ನಾನೂ ಬರಹಗಾರ ಅನ್ನಿಸಿಕೊಂಡಿದ್ದೆ!

ಅಂದಾಜು ಐವತ್ತು ವರ್ಷಗಳ ನಂಟು ನಂದು ಮತ್ತು 'ಸುಧಾ'ಳದ್ದು! ಕಾಲಕಾಲಕ್ಕೆ ಬದಲಾಗುತ್ತಾ ಬಂದ ಪುಟ ವಿನ್ಯಾಸಗಳು, ಅಂಕಣಗಳು, ಬರಹಗಳು... ಪ್ರತಿಯೊಂದು ಪುಟವನ್ನೂ ಬಿಡದೆ ಓದುವ ಆ ಸಂಭ್ರಮವೇ ಸಂಭ್ರಮ. ಕೆಲವೊಮ್ಮೆ ಹಳೆಯ ಸಂಚಿಕೆಗಳನ್ನು ಮತ್ತೆ ಮತ್ತೆ ಓದಿ ಖುಷಿಪಡುವುದೂ ಉಂಟು.

ಸಮುದ್ರ ಮಥನ, ನೀವು ಕೇಳಿದಿರಿ? ವಿಭಾಗಗಳಲ್ಲಾದರೂ ನನ್ನ ಬರಹ ಪ್ರಕಟಣೆಯೇ ನನ್ನ ಸ್ನೇಹಿತಬಳಗಕ್ಕೆ ಹೆಮ್ಮೆ ತರುತ್ತಿತ್ತು!

ನನ್ನ ಬರಹಗಳಿಗೆ ಮೌಲ್ಯ ತಂದುಕೊಟ್ಟ ಪತ್ರಿಕೆಗಳಲ್ಲಿ 'ಸುಧಾ' ಪ್ರಮುಖಳು ಎಂಬ ಹೆಮ್ಮೆ, ಪ್ರೀತಿ, ಕೃತಜ್ಞತೆ ಈ ಕ್ಷಣಕ್ಕೂ ನನ್ನಲ್ಲಿದೆ. ನನ್ನ ಹೆಸರು ಕೇಳಿದಾಕ್ಷಣ ಕೆಲವರು, 'ನಿಮ್ಮ ಹೆಸರು 'ಸುಧಾ'ದಲ್ಲಿ ಕಂಡಿದ್ದು ನೆನಪಿದೆ' ಎಂದು ಹೇಳುವಾಗ ಒಳಗೊಳಗೇ ಉಬ್ಬುತ್ತಿದ್ದೆ!

ಸಮಾಜ, ಸಾಹಿತ್ಯ, ಪರಿಸರ, ವಿಜ್ಞಾನ, ನೀತಿ, ಬರವಣಿಗೆ, ಮನರಂಜನೆಗಳನ್ನು ಆಸ್ವಾದಿಸುವ ಕಲೆ ಮತ್ತು ಬೆಲೆ ಕಲಿಸಿದ್ದೇ ಈ ನನ್ನ 'ಸುಧಾ' ಎನ್ನುವಲ್ಲಿ ಉತ್ಪ್ರೇಕ್ಷೆ ಖಂಡಿತ ಇಲ್ಲ. ಇಂದಿಗೂ 'ಸುಧಾ' ತನ್ನ ಓದುಗಪರ ಕಾಳಜಿ, ಬದ್ಧತೆಗಳನ್ನು ಉಳಿಸಿ ಬೆಳೆಸಿಕೊಂಡಿದ್ದಾಳೆಂಬುದು ಪತ್ರಿಕಾಲೋಕದ ಸಾಧನೆಯೇ ಸರಿ.

—ಚನ್ನಬಸವ ಪುತ್ತೂರ್ಕರ, ಉಡುಪಿ

### ಆತ್ಮಸಖಿ ನೀನು...

ನನಗೆ ಹತ್ತು ವರ್ಷವಿದ್ದಾಗ ನಮ್ಮ ತಂದೆ 'ಸುಧಾ' ಪತ್ರಿಕೆ ತರಿಸಲು ಪ್ರಾರಂಭಿಸಿದರು. ಆಗಿನಿಂದಲೂ 'ಸುಧಾ' ಎಂದರೆ ಪ್ರೀತಿ.

'ಸುಧಾ', ನಿನ್ನಿಂದ ನಾನು ಎಷ್ಟು ಕಲಿತೆ ಗೊತ್ತಾ? ಎಷ್ಟು ಕಥೆಗಳು, ಧಾರಾವಾಹಿಗಳು, ಅವುಗಳ ಸುಂದರ ಚಿತ್ರಗಳು, ಅಬ್ಬಾ... ನನಗೂ ಚಿತ್ರ ಬರೆಯುವ ಆಸೆ ಆಗುತ್ತಿತ್ತು. ಹಾಗೇ ಚಿತ್ರ ಬರೆಯುತ್ತಿದ್ದ ನನಗೆ ಖುಷಿ ಆಗ್ತಾ ಇತ್ತು. 'ಸುಧಾ', ನೀನು ಈಗಂತೂ ಇನ್ನೂ ಸುಂದರ. ಎಪ್ಪತ್ತರ ಹೊಸ್ತಿಲಲ್ಲಿರುವ ನನಗೆ ನೀನು ಆತ್ಮಸಖಿ. ಇನ್ನೂ ನೂರು ವರ್ಷ ಚೆನ್ನಾಗಿರು ಗೆಳತಿ. ವೈದೇಹಿ, ನೇಮಿಚಂದ್ರ ಸೇರಿ ಹಲವರ ಪರಿಚಯವಾಗಿದ್ದೂ ನಿನ್ನಿಂದಲೇ. ಅದಕ್ಕಾಗಿ ತುಂಬು ಧನ್ಯವಾದ.

—ನಿನ್ನ ಅಭಿಮಾನಿ, ಕಮಲಾ